ವಿಜಯವಾಣಿ
ಕನ್ನಡಿಗರ ಧ್ವನಿ

**Wednesday 02nd November 2022, Page No.5B**

## A Well-deserved honor: Sri. K.G. Subbarama Setty Treasurer, RSST

# ಸಾರ್ಥಕತೆ ಮೂಡಿಸಿದ ಗೌರವ

**ಅತ್ಯುನ್ನತ ಗೌರವವಾದ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ರಾಜ್ಯದ 67 ಸಾಧಕರು ಹಾಗೂ ಗಣ್ಯರು ಭಾಜನರಾಗಿದ್ದು, ಮಂಗಳವಾರ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪ್ರದಾನ ಮಾಡಲಾಯಿತು. ಪ್ರಶಸ್ತಿ ಸ್ವೀಕರಿಸಿದ ನಂತರ ವಿಜಯವಾಣಿ ಜತೆ ಹಂಚಿಕೊಂಡ ಪುರಸ್ಕೃತರ ಸಂತಸದ ಅಭಿಪ್ರಾಯಗಳನ್ನು ಇಲ್ಲಿ ನೀಡಲಾಗಿದೆ.**



ಯಾವುದೇ ಅರ್ಜಿ ಸಲ್ಲಿಸದೆ ನಮ್ಮ ಸೇವೆಯನ್ನು ಗುರುತಿಸಿ ಸರ್ಕಾರ ಪ್ರಶಸ್ತಿ ನೀಡಿರುವುದು ಸಂತಸ ತಂದಿದೆ. ಇದು ನನ್ನ ಜವಾಬ್ದಾರಿಯನ್ನು ಇನ್ನಷ್ಟು ಹೆಚ್ಚಿಸಿದೆ.

| ಸುಬ್ಬರಾಮ ಶೆಟ್ಟಿ
ಕ್ಷೇತ್ರ- ಸಂಕೀರ್ಣ



ಪ್ರಶಸ್ತಿ ಸಂದಿರುವುದು ಸಂತಸ ತಂದಿದೆ. ಇದು ವಿದ್ವತ್ತಿಗೆ ಸಂದಿರುವ ಗೌರವವಾಗಿದ್ದು, ಹೊಣೆಗಾರಿಕೆಯನ್ನು ಮತ್ತಷ್ಟು ಹೆಚ್ಚಿಸಿದೆ.

| ವಿದ್ವಾನ್ ಗೋಪಾಲ ಕೃಷ್ಣ ಶರ್ಮ ಕ್ಷೇತ್ರ-ಸಂಕೀರ್ಣ



ವಾಣಿಜ್ಯೋದ್ಯಮದಲ್ಲಿನ ನನ್ನ ಸೇವೆಯನ್ನು ಗುರುತಿಸಿ ಈ ಪ್ರಶಸ್ತಿ ನೀಡಿರುವುದು ಸಂತಸ ಹಾಗೂ ತೃಪ್ತಿ ತಂದಿದೆ. ಇನ್ನಷ್ಟು ಸಾಧನೆ ಮಾಡುವಂತೆ ಪ್ರೇರಣೆ ನೀಡಿದೆ.

| ಬಿ.ವಿ. ನಾಯ್ಡು
ಕ್ಷೇತ್ರ- ವಾಣಿಜ್ಯೋದ್ಯಮ



ಸರ್ಕಾರ ಚಿತ್ರರಂಗದಲ್ಲಿನ ನನ್ನ ಸೇವೆಯನ್ನು ಗುರುತಿಸಿ ಪ್ರಶಸ್ತಿಗೆ ಆಯ್ಕೆ ಮಾಡಿರುವುದು ಸಂತಸ ತಂದಿದೆ. ಇದರಿಂದ ಇನ್ನಷ್ಟು ಉತ್ತಮ ಸೇವೆ ನೀಡುವಂತೆ ಪ್ರೇರಣೆ ನೀಡಿದೆ.

| ಅವಿನಾಶ್ ಕ್ಷೇತ್ರ-ಚಲನಚಿತ್ರ



ಪ್ರಶಸ್ತಿಯ ಬಗ್ಗೆ ಯಾವುದೇ ನಿರೀಕ್ಷೆಗಳು ಇರಲಿಲ್ಲ. ಯಾವ ಅರ್ಜಿಯನ್ನು ಹಾಕದೆ ಪ್ರಶಸ್ತಿ ದೊರೆತಿರುವುದು ಸಂತಸ ತಂದಿದೆ.

| ಡಾ.ಎಂ.ಜಿ. ನಾಗರಾಜ್
ಕ್ಷೇತ್ರ-ಶಿಕ್ಷಣ



ಇಸ್ರೋ ಸಂಸ್ಥೆಯಲ್ಲಿನ ಸೇವೆಯನ್ನು ಪರಿಗಣಿಸಿ ಸರ್ಕಾರ ಈ ಪ್ರಶಸ್ತಿ ನೀಡಿರುವುದು ಸಂತಸ ತಂದಿದೆ. ಇಸ್ರೋ ತಂಡದ ಪರವಾಗಿ ಈ ಪ್ರಶಸ್ತಿಯನ್ನು ಸ್ವೀಕರಿಸಿದ್ದೇನೆ. ನನಗೆ ಇಷ್ಟು ಖ್ಯಾತಿಯನ್ನು ತಂದುಕೊಟ್ಟ ಇಸ್ರೋ ಸಂಸ್ಥೆಗೆ ಈ ಪ್ರಶಸ್ತಿ ಅರ್ಪಿಸುತ್ತೇನೆ.

| ಕೆ. ಶಿವನ್
ಕ್ಷೇತ್ರ-ವಿಜ್ಞಾನ ಮತ್ತು ತಂತ್ರಜ್ಞಾನ, ಬೆಂಗಳೂರು



ನ್ಯಾಯಾಂಗ ಕ್ಷೇತ್ರದಲ್ಲಿನ 64 ವರ್ಷಗಳ ಸೇವೆ ಸಲ್ಲಿಸಿದ್ದು, ನೂರಾರು ವಕೀಲರಿಗೆ ತರಬೇತಿ ನೀಡಿದ್ದೇನೆ. ನನ್ನ ಬಳಿ ತರಬೇತಿ ಪಡೆದ ಕೆಲವರು ಹೈಕೋರ್ಟ್ ನ್ಯಾಯಮೂರ್ತಿಗಳಾಗಿರುವುದು ಗಮನಾರ್ಹ. ಈ ಕ್ಷೇತ್ರದಲ್ಲಿನ ನನ್ನ ಸೇವೆ ಗುರುತಿಸಿ ಸರ್ಕಾರ ಪ್ರಶಸ್ತಿ ನೀಡಿರುವುದು ಸಾರ್ಥಕ ಭಾವನೆ ಮೂಡಿಸಿದೆ.

| ವೆಂಕಟಾಚಲಪತಿ ಕ್ಷೇತ್ರ- ನ್ಯಾಯಾಂಗ



ಪ್ರಶಸ್ತಿಗಾಗಿಅರ್ಜಿ ಹಾಕಿರಲಿಲ್ಲ, ಆವುದೇ ಪ್ರಶಸ್ತಿಯ ನಿರೀಕ್ಷೆಯೂ ಇರಲಿಲ್ಲ. ಹೀಗಿದ್ದರೂ ಇದ್ದಕ್ಕಿದ್ದಂತೆ ಕರೆ ಮಾಡಿ ಪ್ರಶಸ್ತಿಗೆ ಆಯ್ಕೆ ಮಾಡಿರುವುದಾಗಿ ಹೇಳಿದರು. ತುಂಬ ಸಂತೋಷವಾಗಿದೆ, ಸಂತೃಪ್ತಿಯ ಭಾವ ಮೂಡಿದೆ.

| ನಂಜುಂಡರೆಡ್ಡಿ ಕ್ಷೇತ್ರ-ನ್ಯಾಯಾಂಗ



ಯಾವುದೇ ಅಪೇಕ್ಷೆ ಇಲ್ಲದೆ ಎಲೆ-ಮರೆ ಕಾಯಿಯಂತೆ ಸೇವೆ ಸಲ್ಲಿಸುತ್ತಿದ್ದವರನ್ನು ಗುರುತಿಸಿ ಸರ್ಕಾರ ಈ ಪ್ರಶಸ್ತಿ ನೀಡಿರುವುದು ಸಂತಸದ ವಿಚಾರ. 60 ವರ್ಷ ಮೇಲ್ಪಟ್ಟವರನ್ನು ಗುರುತಿಸದೆ ಯುವಜನರ ಸಾಧನೆಗೆ ಪ್ರಶಸ್ತಿ ನೀಡುವುದರಿಂದ ಅವರಲ್ಲಿ ಇನ್ನಷ್ಟು ಸಾಧನೆ ಮಾಡಲು ಪ್ರೇರಣೆ ದೊರೆಯುತ್ತದೆ.

| ಮದನ್ ಗೋಪಾಲ್ ಕ್ಷೇತ್ರ-ಆಡಳಿತ



ಪ್ರಶಸ್ತಿಗೆ ಸೈನಿಕರನ್ನೂ ಆಯ್ಕೆ ಮಾಡಿರುವುದು ಸಂತೋಷ ತಂದಿದೆ. ಡಾ. ರಾಜ್‌ಕುಮಾರ್ ಅವರ 'ಸಿಪಾಯಿ ರಾಮು' ಚಿತ್ರದಿಂದ ಪ್ರೇರಣೆ ಪಡೆದು ನಾನು ಸೈನ್ಯಕ್ಕೆ ಸೇರಿದೆ. ಅವರಂತೆಯೇ ಆದರ್ಶ ವ್ಯಕ್ತಿಯಾಗಿ ಯುವಜನರಿಗೆ ಪ್ರೇರಣೆ ನೀಡುವಂತೆ ಸಿನಿಮಾಗಳನ್ನು ನೀಡಿದ ಅನನ್ಯ ಸಾಧಕ ಪುನೀತ್ ರಾಜ್‌ಕುಮಾರ್ ಅವರ ಕೊನೆಯ ಚಿತ್ರದಲ್ಲಿ ಸೈನಿಕನ ಪಾತ್ರ ನಿರ್ವಹಿಸಿದ್ದಾರೆ. ನನಗೆ ಸಂದಿರುವ ಈ ಪ್ರಶಸ್ತಿಯನ್ನು 'ಕರ್ನಾಟಕ ರತ್ನ' ಪುನೀತ್ ಅವರಿಗೆ ಅರ್ಪಿಸುತ್ತೇನೆ.

| ಸುಬೇದಾರ್ ಕುಮಾರಸ್ವಾಮಿ ಸೈನಿಕ



ಪತ್ರಕರ್ತರಿಗೆ ಪ್ರಶಸ್ತಿ ಕೊಡುವುದು ಒಂದು ರೀತಿ ಎಚ್ಚರಿಕೆ. ಇದರಿಂದ ಪತ್ರಿಕಾರಂಗದ ಜವಾಬ್ದಾರಿ ಇನ್ನೂ ಹೆಚ್ಚಾಗುತ್ತದೆ. ಜನಪರ ಮತ್ತು ಜನನಿಷ್ಠೆ ಪತ್ರಿಕೆಯ ಮೂಲ ಉದ್ದೇಶ. ನಾವು ಯಾವತ್ತೂ ಒಂದು ವ್ಯವಸ್ಥೆಯ ಪರವಾಗಿ ಇರುವುದಿಲ್ಲ. ನಮ್ಮ ಹೋರಾಟ ಎಲ್ಲ ವಂಚಿತ ಜನರಿಗೆ ಅವಕಾಶ ಒದಗಿಸಬೇಕು ಎನ್ನುವುದಾಗಿರುತ್ತದೆ. ಹಾಗಾಗಿ ಈ ಪತ್ರಿಕೋದ್ಯಮಕ್ಕೆ ಪ್ರಶಸ್ತಿ ಕೊಟ್ಟಿದ್ದಾರೆ ಎಂದರೆ ಪತ್ರಿಕಾ ರಂಗದ ಹೋರಾಟಕ್ಕೆ ಸಂದ ಜಯ.

| ಎಚ್. ಆರ್. ಶ್ರೀಶ
ಕ್ಷೇತ್ರ-ಪತ್ರಿಕೋದ್ಯಮ